ಮಳೆ ಕೊರತೆಯಿಂದ ಹೂ ಬಿಡದೆ ಫಸಲು ಶೇ. 15ರಷ್ಟೂ ರೈತನಿಗೆ ಸಿಕ್ಕಿಲ್ಲ | ನಷ್ಟದ ದಾರಿಯಲ್ಲಿ ಅನ್ನದಾತ

ಮಾರಾಟವಾಗದ ಮಾವು ರಸ್ತೆಗೆ ಎಸೆದ ರೈತ

■ ಪಿ.ವೈ.ರವಿಂದ್ರ ಹೇರ್ಳೆ

ಸಂ.ಕ. ಸಮಾಚಾರ, ರಾಮನಗರ

ಎಲ್ಲರ ಬಾಯಲ್ಲಿ ಸಿಹಿ ಮೂಡಿಸುವ ಮಾವು ಮಾರುಕಟ್ಟೆಯಲ್ಲಿ ಮಾರಾಟವಾಗದೆ ರಸ್ತೆ ಅಕ್ಕಪಕ್ಕದ ಕಸದ ರಾಶಿಯಲ್ಲಿ ರಸ ಕಸವಾಗಿ ನೀರಾಗಿ ಕೋಳೆತ ಚಿತ್ರಣಗಳು ರಾಮನಗರದಲ್ಲಿ ಕಾಣುತ್ತಿದೆ.

ಹೌದು ಈ ಬಾರಿ ಮಾವು ಪ್ರಾರಂಭದಿಂದಲೂ ರೈತನಿಗೆ ಸಿಹಿ ತರುವ ಬದಲು ಕಹಿ ತಂದಿದೆ. ಹವಾಮಾನ ಬದಲಾವಣೆ ಮಳೆ ಕೊರತೆಯಿಂದ ಹೂ ಬಿಡದೆ ಫಸಲು ಶೇ. 15ರಷ್ಟೂ ರೈತನಿಗೆ ಸಿಕ್ಕಿಲ್ಲ. ಬಂದ ಫಸಲಿನಲ್ಲಿಯಾದರೂ ಲಾಭ ಮಾಡೋಣ ಎಂದರೆ ಬೆಲೆ ಇಳಿಕೆ ಉತ್ತಮ ಕಾಯಿಗಳು ಸಿಗದೆ ರೈತ ನಷ್ಟದ ದಾರಿಯಲ್ಲಿ ನಡೆಯುವಂತಾಗಿದೆ. ಮಾರುಕಟ್ಟೆಗೆ ತಂದ ಕಾಯಿಗಳು ಕಪ್ಪಾಗಿ ಊಜಿನೊಣಗಳಿಂದ ಕೂಡಿದ್ದು ಹಣ್ಣಾಗಿ ಮಳೆಯಿಂದ ಕಾಯಿಗಳ ಮೇಲೆ ಕಲೆಗಳಾಗಿ ಮಾರಾಟಕ್ಕೆ ಯೋಗ್ಯವಿಲ್ಲದ ಕಾರಣ ವರ್ತಕರು ಮಾವು ಕೊಳ್ಳದ ಹಿನ್ನೆಲೆಯಲ್ಲಿ ರೈತರು ಮಾರುಕಟ್ಟೆ ಕಸದ ಗುಡ್ಡೆಗೆ ರಸ್ತೆ ಅಕ್ಕಪಕ್ಕದಲ್ಲಿ ಸುರಿದು ಹೋಗುತ್ತಿರುವ ಚಿತ್ರಣಗಳು ಕಾಣುತ್ತಿವೆ.

ವರ್ಷವಿಡೀ ಸಾಲ ಸೋಲ ಮಾಡಿ ಮಾವಿನ ತೋಟ ನಿರ್ವಹಣೆ ಮಾಡಿದ್ದರೂ ಮಾರುಕಟ್ಟೆಗೆ ತಂದರೆ ಕೇಳುವವರೇ ಇಲ್ಲ. ಕಿಲೋಗೆ 5 ರೂಪಾಯಿ ಸಿಗುತ್ತಿಲ್ಲ ನಾವು ಸಾಗಾಣಿಕೆ ಬಾಡಿಗೆಯನ್ನು ಹೇಗೆ ಕಟ್ಟಬೇಕು ಎಂಬ ಚಿಂತೆ ನಮ್ಮನ್ನು ಕಾಡುತ್ತಿದ್ದು ವಿಧಿಇಲ್ಲದೆ ಮಾವನ್ನು ರಸ್ತೆಗೆ ಸುರಿದು ಹೋಗುವ ಪರಿಸ್ಥಿತಿ ಬಂದಿದೆ ಎಂದು ಅಳಲು ತೋಡಿಕೊಳ್ಳುತ್ತಾರೆ ರಾಮನಗರ ಭಾಗದ ಮಾವು ಬೆಳೆಗಾರ ರೈತರೊಬ್ಬರು. ಹೆಚ್ಚಾಗಿ ಕಸದ ಗುಡ್ಡೆಗಳಲ್ಲಿ ಸೆಂಧೂರ ಮಾವು ಕಾಣುತ್ತಿದೆ. ಈಲ್ಲೆಯಲ್ಲಿ ಪ್ರತಿಭಾರಿ ಹೆಚ್ಚಾಗಿ ಸೆಂಧೂರ ಮಾವು ರೈತರಿಗೆ ಕೈ ಸೇರುತ್ತದೆ. ಬಾದಾಮಿ, ರಸಪೂರಿ ಮಾವು ವಿರಳವಾಗಿ ಈ ಭಾರಿ ಫಸಲಿಲ್ಲದಿದ್ದರೂ ಒಂದಷ್ಟು ಹೆಚ್ಚಿನ ಸೆಂದೂರ ಫಸಲು ರೈತರ ಕೈಗೆ ಸಿಕ್ಕಿತ್ತು ಆದರೆ ಪ್ರಾರಂಭದಲ್ಲಿ ಸೆಂಧೂರ ಮಾವು ಕೂಡ 100 ರೂ. ಗಡಿ ತಲುಪಿತ್ತು ಆಗ ರೈತರಲ್ಲಿ ಹರ್ಷದ ಹೊನಲು ಮನೆಮಾಡಿತ್ತು.

ದಿನೇ ದಿನೇ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆ ರೈತರನ್ನು ಆತಂಕದತ್ತ ಮುಖ ಮಾಡಿಸಿತ್ತು. ಕಳೆದ ಒಂದು ತಿಂಗಳಿಂದಲೂ ಸೆಂಧೂರ ಮಾವಿಗೆ ಬೆಲೆ ಸಿಗುತ್ತಿಲ್ಲ ಕಳೆದ ಮರ್ನ್ನಾಲ್ಕು ದಿನಗಳಿಂದ ಕೆ.ಜಿ.ಗೆ 5 ರಿಂದ 6 ರೂ.ಗೆ ತಲುಪಿದೆ.

ಬಾದಾಮಿ 15 ರೂ. ಇದೆ. ಅದೆಷ್ಟೋ ರೈತರು ಕೂಲಿ ಸಿಗುವುದಿಲ್ಲ ಎಂದು ತೋಟದಲ್ಲೇ ಮಾವು ಕೊಯ್ಲು ಮಾಡದೆ ಬಿಟ್ಟಿದ್ದಾರೆ. ಬಂದಷ್ಟು ಸಿಗಲಿ ಔಷಧ ಖರ್ಚಿಗಾದರೂ ಒಂದಷ್ಟು ಹಣ ಸಿಗಲಿ ಎಂದು ಮಾರಾಟ ಮಾಡಲು ಕಾಯಿ ಕೊಯ್ಲುಮಾಡಿ ತಂದರೂ ಮಾರುಕಟ್ಟೆಗೆ ತರುವ ಮುನ್ನವೇ ಕಾಯಿ ಗುಣಮಟ್ಟ ಹಾಳಾಗುತ್ತಿರುವ ಕಾರಣ ರೈತರು ವಿಧಿಇಲ್ಲದೆ ರಸ್ತೆ ಪಕ್ಕಕ್ಕೆ ಸುರಿದು ಹೋಗುವಂತಾಗಿದೆ. ಎಂಬುದು ಸಾರ್ವಜನಿಕರ ಅಳಲೂತೊಡಿಕೊಂಡರು.

> ನೆರೆ ಹೊರ ರಾಜ್ಯದ ಕಾರ್ಖಾನೆಯವರು ಕಾಯಿ ಕೊಳ್ಳಲು ಆಸಕ್ತಿ ವಹಿಸುತ್ತಿಲ್ಲ. ಇದರಿಂದ ರೈತರು ಕಾರ್ಖಾನೆಗೆ ತಂದ ಮಾವು ಬಿಕರಿಯಾಗದೆ ಗುಡ್ಡೆಯಲ್ಲೇ ಹಣ್ಣಾಗಿ ಉಪಯೋಗಕ್ಕೆ ಇಲ್ಲದಂತಾಗುತ್ತಿದೆ ಇದರಿಂದ ಕಸದ ಗುಡ್ಡೆ ಸೇರುತ್ತಿದೆ. ಒಂದೇ ಸಮನೆ ಮಳೆಯೂ ಕೂಡ ಸುರಿಯುತ್ತಿದೆ. ಕಾಯಿ ಕಳಿಸಬೇಡಿ ಎಂದು ಕಾರ್ಖಾನೆಯವರು ಹೇಳುತ್ತಿದ್ದಾರೆ. ಬರುತ್ತಿರುವ ಉತ್ತಮ ಕಾಯಿಗಳನ್ನು ಸ್ಥಳೀಯವಾಗಿ ಮಾರಾಟಗಾರರಿಗೆ ಮಾರಾಟ ಮಾಡುತ್ತಿದ್ದೇವೆ.
>
> ■ **ರಾಜು** | ಮಂಡಿ ವರ್ತಕ.

‘ಕನ್ನಡ ಸಾಹಿತ್ಯ ಪರಿಷತ್ ನಮ್ಮ ಹೆಮ್ಮೆಯ ಪ್ರತೀಕ’

ಸಂ.ಕ. ಸಮಾಚಾರ, ವಿಜಯಪುರ

ಪಟ್ಟಣದಲ್ಲಿ ನೂತನವಾಗಿ ನಿರ್ಮಾಣ ಗೊಂಡಿರುವ, ಕನ್ನಡ ಸಾಹಿತ್ಯ ಭವನವನ್ನು ಮಾಜಿ ಸಂಸದ ಸಿ.ನಾರಾಯಣಸ್ವಾಮಿ ಉದ್ಘಾಟನೆ ಮಾಡಿದರು. ಭವನದ ನಿರ್ಮಾಣಕ್ಕೆ ಧನ ಸಹಾಯ ಮಾಡಿದ್ದವರನ್ನು ಸನ್ಮಾನಿಸಿದರು. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಲೋಕವು ಅಪಾರವಾದ ಇತಿಹಾಸ ಮತ್ತು ಶ್ರೀಮಂತಿಕೆಯನ್ನು ಹೊಂದಿದೆ. ಕುವೆಂಪು, ಬೇಂದ್ರೆ, ಶಿವರಾಮ ಕಾರಂತ, ಗಿರೀಶ್ ಕಾರ್ನಾಡ ಮತ್ತು ಡಿ.ವಿ.ಜಿ. ಮುಂತಾದ ಮಹನೀಯರು ತಮ್ಮ ಅದ್ಭುತ ಕೃತಿಗಳ ಮೂಲಕ ಭಾಷೆಯನ್ನು ಉನ್ನತ ಮಟ್ಟಕ್ಕೇರಿಸಿದ್ದಾರೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್.ಕೃಷ್ಣಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ರಾಜಣ್ಣ ಮಾತನಾಡಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಚಿ.ಮಾ. ಸುಧಾಕರ್, ತಾಲೂಕು ಅಧ್ಯಕ್ಷ ಆರ್.ಕೆ.ನಂಜೇಗೌಡ, ಎ.ಸಿ ಮಂಜುನಾಥ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಶ್ರೀನಿವಾಸ್, ಜೊನ್ನಹಳ್ಳಿ ರಾಮಾಂಜಿನಪ್ಪ, ಅಪ್ಪಯಣ್ಣ, ಮುನಿರಾಜು, ಮೋಹನ್, ಬಲಮುರಿ ಶ್ರೀನಿವಾಸ್, ದೊಡ್ಡಬಳ್ಳಾಪುರ ದಾಸಪ್ಪ, ಅಧ್ಯಕ್ಷ ಗೋವಿಂದರಾಜು, ಚಂದ್ರಶೇಖರ್ ಹಡಪದ್, ಕೆಂಪೇಗೌಡ, ಪುರುಷೋತ್ತಮ ಗೌಡ, ನೆಲಮಂಗಲದ ಚೌಡಯ್ಯ, ರಮೇಶ್, ರಾಮು, ಸದಾನಂದ ಆರಾಧ್ಯ, ಶರಣಯ್ಯ ಹಿರೇಮಠ್, ಕನಕರಾಜು, ಪರಮೇಶ್, ಮಹೇಶ್, ಗೋವಿಂದರಾಜು ಇತರರಿದ್ದರು.

ಮಕ್ಕಳು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಿ: ಕೆಂಪಣ್ಣ

ಸಂ.ಕ.ಸಮಾಚಾರ, ನಂದಗುಡಿ

ಬಾಲ್ಯದಿಂದಲೇ ಪರಿಸರ ಸಂರಕ್ಷಣೆ ಕುರಿತು ಅರಿವು ಹೊಂದುವ ಮೂಲಕ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಎದುರಾಗಬಹುದಾದ ಜಾಗತಿಕ ತಾಪಮಾನ ಸೇರಿದಂತೆ ಪರಿಸರದ ಮೇಲಾಗುತ್ತಿರುವ ಒತ್ತಡ ತಗ್ಗಿಸಲು ನೆರವಾಗಬಹುದು ಎಂದು ಪಿ.ಡಿ.ಒ. ಕೆಂಪಣ್ಣ ಹೇಳಿದರು

ಅವರು ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ಸರ್ಕಾರಿ ಉರ್ದು ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿ, ಮಕ್ಕಳು ಕಲಿಕೆಯ ಅವಧಿಯಲ್ಲಿ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮರ ಕಡಿಯಬೇಕಾದಲ್ಲಿ ಕಡಿದ ಒಂದು ಮರಕ್ಕೆ ಬದಲಾಗಿ ಹತ್ತು ಸಸಿಗಳನ್ನು ನೆಟ್ಟು ಪೋಷಣೆ ಮಾಡುವ ಮೂಲಕ ಪರಿಸರದ ಮೇಲಾಗುವ ನಷ್ಟ ತುಂಬಿಕೊಡುವಂತೆ ಸಮಾಜಕ್ಕೆ ಮನವರಿಕೆ ಮಾಡಿಕೊಡಲು ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ತಿಳಿಸಿದರು.

ದೈಹಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಡಿ.ಕೃಷ್ಣಪ್ಪ, ಶಾಲಾ ಮುಖ್ಯ ಶಿಕ್ಷಕಿ ಜಿನತ ಮುನ್ನಿಸ, ಸಹ ಶಿಕ್ಷಕಿ ರತ್ನಮ್ಮ, ಪರಹಾನಕನಮ್, ಗ್ರಂಥಾಲಯ ಮೇಲ್ವಿಚಾರಕ ಹೆಚ್. ಮಂಜುನಾಥ್, ಕರ ವಸೂಲಿಗಾರ ಮನೋಜ್ ಕುಮಾರ್ ಮೊದಲಾದವರಿದ್ದರು.

ಡಿಕೆಶಿ ಕೆಚ್ಚೆದೆಯ ನಾಯಕ: ಮಾಜಿ ಶಾಸಕ ಲಿಂಗಪ್ಪ

■ ಬೆಂಕಿ ಮಹದೇವು

ಸಂ.ಕ. ಸಮಾಚಾರ, ಬಿಡದಿ

ಡಿ.ಕೆ. ಶಿವಕುಮಾರ ಕೆಚ್ಚೆದೆಯ ನಾಯಕ ಅವರ ಗುಣವೇ ಮುಖ್ಯಮಂತ್ರಿ ಹುದ್ದೆವರೆಗೆ ಕರೆತಂದಿದೆ ಎಂದು ಡಿ.ಕೆ. ಶಿವಕುಮಾರ್ ಅವರ ನಿಕಟವರ್ತಿ ಬಿಡದಿಯ ಇಟ್ಟಮಡು ಗ್ರಾಮದ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಡಿಕೆಶಿ ವ್ಯಕ್ತಿತ್ವವನ್ನು ಬಣ್ಣಿಸಿದರು.



ಶಿವಕುಮಾರ್ ಜತೆಗೆ ಇದ್ದ ಒಡನಾಟವನ್ನು ನೆನಪಿಸಿಕೊಂಡ ಅವರು ಡಿಕೆಶಿ ಒಮ್ಮೆ ಮುಂದಕ್ಕೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಂಡ ಉದಾಹರಣೆಯೇ ಇಲ್ಲ. ಆರಂಭದ ದಿನಗಳಿಂದಲೂ ಸವಾಲುಗಳನ್ನು ಮೆಟ್ಟಿಯೇ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರಲ್ಲಿದ್ದ ದೂರದೃಷ್ಟಿ ಗಮನಿಸಿದ್ದೆನೆ.

ಮುಂದೊಮ್ಮೆ ಅವರು ಸಿ.ಎಂ ಆಗುವುದರಲ್ಲಿ ಅನುಮಾನವಿಲ್ಲ ಎಂದು ಅಂದುಕೊಂಡಿದ್ದೆ ಅದೀಗ ನಿಜವಾಯಿತು’ ಎಂದು ಸಂತಸ ವ್ಯಕ್ತಪಡಿಸಿದರು. ನಮ್ಮಿಬ್ಬರ ನಡುವೆ 19 ವರ್ಷಗಳ ವಯಸ್ಸಿನ ಅಂತರವಿದ್ದರೂ ಸ್ನೇಹಕ್ಕೆ ಅದು ಅಡ್ಡಿಯಾಗಲಿಲ್ಲ. ಬೆಂಗಳೂರಿನ ಜನರಲ್ ಹಾಸ್ಪೆಲ್‌ನಲ್ಲಿ ನಡೆದ ನಮ್ಮಿಬ್ಬರ ಭೇಟಿ ನಂತರ ಆತ್ಮೀಯತೆಗೆ ತಿರುಗಿತು. ಸಿ.ಎಂ ಹುದ್ದೆ ಅವರಿಗೆ ಸುಲಭವಾಗಿ ಒಲಿದಿಲ್ಲ. ಅವರ ಸತತ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲ ಇದಾಗಿದೆ.

ಪಕ್ಷದ ವಿಷಯದಲ್ಲಿ ಆರೋಗ್ಯವನ್ನೂ ಲೆಕ್ಕಿಸದೆ ನಿದ್ದೆಗೆಟ್ಟು ಕೆಲಸ ಹಾಕಿದ್ದಾರೆ. ಎಷ್ಟೋ ಸಲ ಕಾರಿನಲ್ಲೇ ಮಲಗಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಅವರ ಶ್ರೇಯಸ್ಸಿನ ಹಿಂದೆ ಸಹೋದರ ಡಿ.ಕೆ. ಸುರೇಶ್ ಕೊಡುಗೆಯೂ ದೊಡ್ಡದು’ ಎಂದು ಹೇಳಿದರು.

ಪರಿಸರ ಸಂರಕ್ಷಣೆಗೆ ಮುಂದಾಗಿ

ಪರಿಸರ ದಿನಾಚರಣೆಯಲ್ಲಿ ರೇಣುಕುಮಾರ್

ಸಂ.ಕ. ಸಮಾಚಾರ, ಕನಕಪುರ

ಪರಿಸರ ಕಾಪಾಡುವುದರಲ್ಲಿ ಪ್ರಮುಖವಾಗಿ ಶಾಲಾ ವಿದ್ಯಾರ್ಥಿಗಳು, ಯುವಕ ಮಿತ್ರರು ಪಾಲ್ಗೊಳ್ಳಬೇಕು, ಆಗ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಪರಿಸರವನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ ಎಂದು ಬೆಂಗಳೂರು ಮಹಾನಗರ ಲಯನ್ಸ್ ಸರ್ವಿಸಸ್ ಫೌಂಡೇಷನ್ ಅಧ್ಯಕ್ಷ ವಿ.ರೇಣುಕುಮಾರ್ ಹೇಳಿದರು.

ಶುಕ್ರವಾರ ತಾಲೂಕಿನ ಮರಳವಾಡಿ ರಸ್ತೆ ಕರಿಕಲ್‌ದೊಡ್ಡಿ ಗೇಟ್ ಬಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಮಹಾನಗರ ಲಯನ್ಸ್ ಸರ್ವಿಸಸ್ ಫೌಂಡೇಷನ್ ಹಾಗೂ ನಿಸರ್ಗ ಇಕೋ ಕ್ಲಬ್ ವತಿಯಿಂದ ಜರುಗಿದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಊರಿಗೊಂದು ವನ, ಪ್ರತಿ ಮನೆಗೆ 2 ಗಿಡ, ಮಗುವಿಗೊಂಡು ಸಸಿ ಬೆಳೆಸಿ ಪರಿಸರ ಉಳಿಸಿ, ಗಿಡಮರಗಳನ್ನು ಪ್ರೀತಿಯಿಂದ ಬೆಳೆಸಿ, ಸ್ನೇಹಮಹಿಯಂತೆ ಕಾಣಬೇಕು. ಆ ಮರಗಳಲ್ಲಿ ಬರುವ ಶುದ್ಧ ಗಾಳಿಯನ್ನು ಸೇವಿಸಲು ಅನುಕೂಲವಾಗುತ್ತದೆ ಎಂದರು.

ಲಯನ್ಸ್ ಜಿಲ್ಲಾ ಸಸಿ ನೆಡುವ ಕಾರ್ಯಕ್ರಮದ ಅಧ್ಯಕ್ಷ ಮರಸಪ್ಪ ರವಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯಿನಿ ಗೀತಾ ಮಾತನಾಡಿದರು. ಸರ್ವಿಸಸ್ ಫೌಂಡೇಷನ್‌ನ ಪದಾಧಿಕಾರಿಗಳಾದ ಕೆ.ಎನ್.ಪಾಟೀಲ್, ಕೆ.ಜಿ.ಶ್ರೀಕಂಠೇಶ್ವರ, ಖಜಾಂಚಿ ಕೆ.ಭಾರತಿ, ಪ್ರಶಾಂತ್, ಕುಮಾರ್, ಸಿ.ಆರ್.ಪಿ ಸುಬ್ರಮಣ್ಯಂ, ನಾಗರಾಜು, ಅಶ್ವಥ್‌ನಾರಾಯಣ್ ಇತರರಿದ್ದರು.

ಸ್ತ್ರೀಯರು ಸಾಮಾಜಿಕ, ಶೈಕ್ಷಣಿಕ ಪ್ರಗತಿ ಸಾಧಿಸಲಿ:ಲೋಕೇಶ್

ಸಂ.ಕ. ಸಮಾಚಾರ, ರಾಮನಗರ

ರೈತ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದರ ಜತೆಗೆ ಅವರ ಕುಟುಂಬಗಳು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು ಎಂಬ ಉದ್ದೇಶದಿಂದ ಜಿಲ್ಲೆಯ ಕುರಿ ಪೋಷಕರ ಸಂಘ ವಿವಿಧ ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಆರ್.ಎನ್.ಲೋಕೇಶ್ ತಿಳಿಸಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಯ ರೈತ ಭವನದಲ್ಲಿ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕುರಿ ಮತ್ತು ಮೇಕೆ ಸಾಕಾಣಿಕೆಯು ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದು, ಕ್ಷೇತ್ರದ ರೈತರ ಜೀವನಮಟ್ಟ ಸುಧಾರಣೆಗೆ ಸಂಘ ನಿರಂತರವಾಗಿ ಶ್ರಮಿಸುತ್ತಿದೆ. ಸದಸ್ಯರ ಮಕ್ಕಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣ, ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ವಿಶೇಷ ತರಬೇತಿ, ಅಪಘಾತ ವಿಮಾ ಯೋಜನೆ, ಸದಸ್ಯರ ನಿಧನದ ಸಂದರ್ಭದಲ್ಲಿ ಆರ್ಥಿಕ ನೆರವು, ಸಾಲ ಸೌಲಭ್ಯ ಹಾಗೂ ಪ್ರಕೃತಿ ವಿಕೋಪ ವಿಮೆ ಸೇರಿದಂತೆ ಹಲವು ಯೋಜನೆಗಳನ್ನು ಸಂಘದಿಂದ ಜಾರಿಗೊಳಿಸಲಾಗುತ್ತಿದೆ ಎಂದರು.

ಉಪಾಧ್ಯಕ್ಷ ಮರಿನಂಜೇಗೌಡ, ನಿರ್ದೇಶಕ ಕಬ್ಬಾಳೇಗೌಡ, ಕೃಷ್ಣಪ್ಪ ಎಸ್.ಬಿ., ಸುರೇಶ್ ಸಿ.ಎನ್., ಎಂ.ಬೈರಯ್ಯ, ಜಿ.ಎಂ. ನಾಗರಾಜು, ತ್ರಿಪುರಾಂಭ, ಗೀತಾಕುಮಾರಿ, ಕಾರ್ಯದರ್ಶಿ ತಮ್ಮಣ್ಣಗೌಡ.ಎಸ್., ಉಮೇಶ್.ಕೆ.ಎಂ., ಸದಸ್ಯರಾದ ಅಮ್ಮಳ್ಳಿದೊಡ್ಡಿ ರಮೇಶ್, ಅಕ್ಕೂರು ದೇಶಿಗೌಡ, ರಾಮನಗರ ಲೋಕೇಶ್ ಮೊದಲಾದವರಿದ್ದರು.

ಕೆರೆಗಳ ಅಭಿವೃದ್ಧಿಯಿಂದ ರೈತರಿಗೆ ಹೆಚ್ಚು ಸಹಕಾರಿ: ಜಯಕರ ಶೆಟ್ಟಿ

ಸಂ.ಕ. ಸಮಾಚಾರ, ಕೂಟಗಲ್

ಧರ್ಮಸ್ಥಳ ಮಂಜುನಾಥ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ವೀರೇಂದ್ರ ಹೆಗ್ಗಡೆ ಅವರು ಮಾಡುತ್ತಿರುವಂತಹ ಸಮಾಜಸೇವೆಗಳ ಬಗ್ಗೆ ಹಾಗೂ ಯೋಜನೆಯ ವತಿಯಿಂದ ಹಲವಾರು ಕೆರೆಗಳ ಅಭಿವೃದ್ಧಿಯಿಂದ ಜನಸಾಮಾನ್ಯರಿಗೆ ಹಾಗೂ ಪ್ರಾಣಿ ಸಂಕುಲಗಳಿಗೆ ಹೆಚ್ಚು ಪ್ರಯೋಜನ ಆಗುವುದರ ಮೂಲಕ ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಹೆಚ್ಚು ಸಹಕಾರಿಯಾಗಿದೆ ಎಂದು ಜಿಲ್ಲಾ ನಿರ್ದೇಶಕರಾದ ಶ್ರೀಜಯಕರ ಶೆಟ್ಟಿ ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ರಾಮನಗರ ತಾಲೂಕಿನ ವತಿಯಿಂದ ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿ ಜಾಲಮಂಗಲ ವಲಯದ ತಾಳವಾಡಿ ಗ್ರಾಮದಲ್ಲಿರುವ ಸರ್ಕಾರಿ ದೊಡ್ಡ ಕೆರೆಯನ್ನು ನಮ್ಮೂರು ನಮ್ಮ ಕೆರೆ ಯೋಜನೆ ಅಡಿಯಲ್ಲಿ ಕೆರೆ ಹೂಳೆತ್ತುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಯೋಜನೆಯನ್ನು ಎಲ್ಲರೂ ಸದ್ಬಳಸಿಕೊಳ್ಳುವುದರ ಮೂಲಕ ಕೆರೆಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಾಲಮಂಗಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲತಾ, ಜಿಲ್ಲಾ ಜನಜಾಗೃತಿ ಸದಸ್ಯರಾದ ರಾಜಣ್ಣ, ಮಂಜುನಾಥ್ ತಾಲೂಕು ಯೋಜನಾಧಿಕಾರಿ ಮುರಳೀಧರ.ಎ., ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶಿವಣ್ಣ, ಕೃಷಿ ಅಧಿಕಾರಿ ವಿನೋದ್, ಮೇಲ್ವಿಚಾರಕ ಗುಡ್ಡನಗೌಡ ಪಾಟೀಲ್ ಹಾಗೂ ಊರಿನ ಮುಖಂಡರು ಗ್ರಾಮಸ್ಥರು ಉಪಸ್ಥಿತರಿದ್ದರು.

ಅಗತ್ಯ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ತಲುಪಿಸಿ: ಚಂದ್ರಯ್ಯ

ಸಂ.ಕ. ಸಮಾಚಾರ, ರಾಮನಗರ

ಸರ್ಕಾರವು ಪೌರಕಾರ್ಮಿಕರು ಹಾಗೂ ಅವರ ಕುಟುಂಬದವರ ಅನುಕೂಲಕ್ಕಾಗಿ ಆರೋಗ್ಯ, ಶಿಕ್ಷಣ, ಮೂಲಭೂತ ಅಗತ್ಯಗಳು ಸೇರಿದಂತೆ ಹಲವಾರು ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ, ಅವುಗಳನ್ನು ಆದ್ಯತೆಯ ಮೇರೆಗೆ, ಲೋಪದೋಷಗಳಿಲ್ಲದಂತೆ ತಲುಪಿಸಬೇಕೆಂದು ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಅನುಷ್ಠಾನ ಸಂಬಂಧ ಆಯೋಜಿಸಲಾಗಿದ್ದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಶೇಖರ್ ಅವರು ಮಾತನಾಡಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಧನರಾಜ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ದೀಪ ಎಸ್., ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಅನುಷ್ಠಾನದ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸದಸ್ಯರುಗಳಾದ ಆರ್.ನಾಗರಾಜು, ಚಲಪತಿ, ಡಾ.ಲೋಕೇಶ್, ಜೀವನ್ ಮೂರ್ತಿ ಸೇರಿದಂತೆ ನಗರಸಭೆಗಳ ಪೌರಾಯುಕ್ತರು, ಪುರಸಭೆ ಮುಖ್ಯಾಧಿಕಾರಿಗಳು ಇದ್ದರು.

PUBLIC NOTICE

I, KIRAN KAMAL PRASAD S/o Late Xaviour Lobo, Secretary Vimukti Trust, No.1289/4, 7th cross road, ISEC Main Road, Nagarabhavi Village and Post, Bengaluru 560072.On 03.05.2026 when I was cleaning the office records, the original Vimukti trust deed vide registered document no. IV 252/96-97 was found missing. It was not traced anywhere. I have notified the jurisdictional police about the loss of the said document on 05.05.2026 vide lost report No.2187798/2026.Any person finding the aforesaid document is requested to kindly contact the undersigned and handover the same immediately and the person will be suitably rewarded.

KIRAN KAMAL PRASAD S/o Late Xaviour Lobo, Secretary Vimukti Trust, No.1289/4,7th cross road, ISEC Main Road,Nagarabhavi Village and Post, Bengaluru 560072. Mobile 9008487287

ಸಾರ್ವಜನಿಕ ಪ್ರಕಟಣೆ

ಇದರಿಂದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ಪ್ರಕಾಶ ಹೆಗಡೆ.ಕೆ., ದಿವಂಗತ ಕರಂಬಾ ಸುಂದರ ಹೆಗಡೆ ಅವರ ಮಗ, ವಯಸ್ಸು ಸುಮಾರು 59 ವರ್ಷಗಳು, ಫ್ಲಾಟ್ ನಂ. 207, ಮಾರ್ಗೋಸಾ ಕೋರ್ಟ್ ಅಪಾರ್ಟ್‌ಮೆಂಟ್, 17ನೇ ಮತ್ತು 18ನೇ ಕ್ರಾಸ್ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560055, ಆಧಾರ್ ಸಂಖ್ಯೆ: 6740 7032 1155, ಇವರು ತಮ್ಮ ಹೆಸರಿನಲ್ಲಿರುವ ಮೂಲ ಮಾರಾಟ ಪತ್ರ (Sale Deed) ದಿನಾಂಕ 30.11.2006, ದಾಖಲಾತಿ ಸಂಖ್ಯೆ RJN-104758200607, CD ಸಂಖ್ಯೆ RJND100, ದಿನಾಂಕ 30.11.2006 ರಂದು ರಾಜಾಜಿನಗರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟಿದ್ದ, ಒಟ್ಟು 18 ಪುಟಗಳ ಪೈಕಿ 5ನೇ ಹಾಗೂ 6ನೇ ಪುಟಗಳನ್ನು ಕಳೆದುಕೊಂಡಿರುತ್ತಾರೆ. ಸದರಿ ದಾಖಲೆಗಳ ಕಳೆದುಹೋಗಿರುವ ಬಗ್ಗೆ, ದಿನಾಂಕ 04.06.2026 ರಂದು ಇ-ಪೊಲೀಸ್ ದೂರು ದಾಖಲಿಸಲಾಗಿದೆ. ಆದ್ದರಿಂದ ಮೇಲ್ಕಂಡ ದಾಖಲೆಗಳಲ್ಲಿ ವಿವರಿಸಲ್ಪಟ್ಟಿರುವ ಕೆಳಕಂಡ ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಇತರ ಯಾರಿಗಾದರೂ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ಅಗತ್ಯ ದಾಖಲೆಗಳೊಂದಿಗೆ ಕೆಳಸಹಿ ವಕೀಲರಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಹಾಗೆ ತಿಳಿಸದಿದ್ದಲ್ಲಿ ಸದರಿ ಆಸ್ತಿಯ ಹಕ್ಕುಪತ್ರಗಳು ಸ್ಪಷ್ಟ ಹಾಗೂ ಮಾರುಕಟ್ಟೆ ಯೋಗ್ಯವಾಗಿವೆ ಮತ್ತು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗುವುದು.

ಅನುಸೂಚಿ ಆಸ್ತಿ

ಮಲ್ಲೇಶ್ವರಂ, ಬೆಂಗಳೂರು ನಗರದಲ್ಲಿರುವ 13ನೇ ಕ್ರಾಸ್, 8ನೇ ಮುಖ್ಯ ರಸ್ತೆ ಮತ್ತು ವೆಸ್ಟ್ ಪಾರ್ಕ್ ರಸ್ತೆಯ ಮಧ್ಯೆ, 13ನೇ ಕ್ರಾಸ್‌ನ ಕೊನೆಯ ಭಾಗದ ಸಮೀಪ, ಬಿ.ಎಂ.ಪಿ. ವಾರ್ಡ್ ನಂ.7 ರ ವ್ಯಾಪ್ತಿಯಲ್ಲಿರುವ ಖಾತಾ ನಂ. 10/1 (ಹಳೆಯ ನಂ. 11), BMP PID ನಂ. 72010/1 ಹೊಂದಿರುವ ಜಾಗದ ಮೇಲೆ ನಿರ್ಮಿಸಲಾದ 'ಪಂಚಜನ್ಯ' ಎಂಬ ಅಪಾರ್ಟ್‌ಮೆಂಟ್ ಕಟ್ಟಡದ ಎರಡನೇ ಮಹಡಿಯಲ್ಲಿರುವ ಎಸ್1 (S-1) ಸಂಖ್ಯೆಯ ವಸತಿ ಫ್ಲಾಟ್, 950 ಚದರ ಅಡಿ ಸೂಪರ್ ಬಿಲ್ಟ್‌ಅಪ್ ವಿಸ್ತೀರ್ಣವನ್ನು ಹೊಂದಿದ್ದು, ಅದಕ್ಕೆ ಸಂಬಂಧಿಸಿದ 275 ಚದರ ಅಡಿ ಅವಿಭಜಿತ ಹಕ್ಕು (Undivided Share), ನೆಲ ಮಹಡಿಯಲ್ಲಿ ಒಂದು ಕವರ್ಡ್ ಕಾರು ಪಾರ್ಕಿಂಗ್ ಸ್ಥಳ ಹಾಗೂ ಲಿಫ್ಟ್ ಸೌಲಭ್ಯ ಸಹಿತ. ಗಡಿಗಳು: ಪೂರ್ವಕ್ಕೆ : ಕಾರ್ಪೋರೇಷನ್ ರಸ್ತೆ, ಪಶ್ಚಿಮಕ್ಕೆ : ಶ್ರೀ ನರಸಿಂಹಯ್ಯ ಅವರ ಮನೆ, ಉತ್ತರಕ್ಕೆ : ಶ್ರೀ ಚಿಕ್ಕಣ್ಣ ಅವರ ಮನೆ, ದಕ್ಷಿಣಕ್ಕೆ : ಹೊನ್ನಯ್ಯ ಹೆಗಡೆ ಅವರ ಆಸ್ತಿ.

ಸಂಪರ್ಕ: ಅಡ್ವಕೇಟ್ ಎಸ್. ಚಂದ್ರಶೇಖರ್
ಸಂಖ್ಯೆ 47/1, ಪ್ರಥಮ ಮಹಡಿ, 15ನೇ ಕ್ರಾಸ್ ರಸ್ತೆ, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003. ಮೊಬೈಲ್ : 9980451655. ಇಮೇಲ್: csadvocate44@gmail.com

ಸಾಲ ವಸೂಲಾತಿ ನ್ಯಾಯಮಂಡಳಿ -1ರ ಸಮಕ್ಷಮ, ಬೆಂಗಳೂರು, ಕರ್ನಾಟಕ

ಬಿಎಸ್‌ಎನ್‌ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು

ಒ.ಎ. ನಂ. 641/2023

ನಡುವೆ : ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ಇಂದಿರಾನಗರ ಶಾಖೆ, ನಂ. 548, ಶ್ಯಾಮ್ ಕಾಂಪ್ಲೆಕ್ಸ್,ಸಿಎಂಹೆಚ್ ರಸ್ತೆ, ಇಂದಿರಾನಗರ, ಬೆಂಗಳೂರು – 560 038. ... ಅರ್ಜಿದಾರರು

ಮತ್ತು

1. ಮೆ. ಪತಂಜಲಿ ಚಿಕಿತ್ಸಾಲಯ, ಪ್ರತಿನಿಧಿ ಸುವವರು ಇದರ ಮಾಲೀಕರಾದ ಶ್ರೀ ಬಿ. ರಘುಪತಿ ವಾಸ : ನಂ. 790, 9ನೇ ಎ ಮುಖ್ಯ ರಸ್ತೆ, ಇಂದಿರಾನಗರ ಮೆಟ್ರೊ ಸ್ಟೇಷನ್ ಹತ್ತಿರ, ಬೆಂಗಳೂರು – 560 038.

2. ಶ್ರೀ ಬಿ. ರಘುಪತಿ, ಮಾಲೀಕರು ಮತ್ತು ಜಾಮೀನುದಾರರು S/o ಬುರುಡಿ ನಾಗರಾಜಪ್ಪ ವಯಸ್ಸು 38 ವರ್ಷ ವಾಸ: ನಂ. 737, ಜಾನ್ಸಿಕಾಟೇಜ್, ಓಂಶಕ್ತಿ 1ನೇ ಮುಖ್ಯ ರಸ್ತೆ, ಉದಯನಗರ, ಬೆಂಗಳೂರು – 560 016. ...ಪ್ರತಿವಾದಿ ನಂ. 1 ಮತ್ತು 2

ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ 1993ರ ನಿಯಮ 23(8)ರಡಿ ಪತ್ರಿಕಾ ಪ್ರಕಟಣೆಯ ಮೂಲಕ ಪ್ರತಿವಾದಿ ನಂ.1 ಮತ್ತು 2 ಇವರಿಗೆ ನೀಡಲಾದ ಸಮನ್ಸ್

ಆದಾಗಿ, ಅರ್ಜಿದಾರರು ನಿಮ್ಮ ವಿರುದ್ಧ ಸಾಲ ವಸೂಲಾತಿ ನ್ಯಾಯ ಮಂಡಳಿ ಬ್ಯಾಂಕುಗಳ ಮತ್ತು ಹಣಕಾಸು ಸಂಸ್ಥೆಗಳ ಸಾಲ ವಸೂಲಾತಿ ಕಾಯಿದೆ 1993 ಇದಕ್ಕೆ ಅನ್ವಯವಾಗುವಂತಹ ಕಲಂ 19ರ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ **ರೂ.24,02,109 /-** (ರೂಪಾಯಿ ಇಪ್ಪತ್ತನಾಲ್ಕು ಲಕ್ಷ ಎರಡು ಸಾವಿರದ ಒಂದು ನೂರ ಒಂಬತ್ತು ಮಾತ್ರ) ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿಯ ವಸೂಲಾತಿಗಾಗಿ ದಾಖಲು ಮಾಡಿರುತ್ತಾರೆ. ನಿಮಗೆ ನಿರ್ದೇಶಿಸುವು ದೇನೆಂದರೆ ಖುದ್ದಾಗಿ ಅಥವಾ ಅವರ ವಕೀಲರ ಮೂಲಕವಾಗಲೀ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿ. **07.07.2026** ರಂದು ಬೆಳಿಗ್ಗೆ 10.30 ಘಂಟೆಗೆ ನ್ಯಾಯಾಧಿಕರಣದ ಮುಂದೆ ಹಾಜರಾಗಿ ಯಾಕಾಗಿ ಮೇಲೆ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂದು ತಿಳಿಸತಕ್ಕದ್ದು.

ವಿಫಲರಾದಲ್ಲಿ ಸದರಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ತೀರ್ಮಾನಿ ಸಲಾಗುವುದು.

ನ್ಯಾಯಮಂಡಳಿಯ ಮೊಹರಿನೊಂದಿಗೆ ನನ್ನಿಂದ ದಿನಾಂಕ **04.05.2026** ರಂದು ನೀಡಲ್ಪಟ್ಟಿದೆ.

ಸಹಿ/– ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಾಧಿಕರಣ -1, ಬೆಂಗಳೂರು
ಅರ್ಜಿದಾರರ ಪರ ವಕೀಲರು
ಶ್ವೇತಾ ರವಿಶಂಕರ್ ಅಂಡ್ ಅಸೋಸಿಯೇಟ್ಸ್

PUBLIC NOTICE

NOTICE IS HEREBY GIVEN that my client **Sri. Vijay Rozario,** S/o Philip Raja, aged about 46 years, R/at Chikkagubbi Village, Bidarahalli Hobli, Bengaluru East Taluk, and others are filed a suit for partition and separate possession against **Sri Philip Raja and others** before the Principal Senior Civil Judge, Bengaluru Rural District at Bengaluru in O.S. No. 425/2025 in respect of the schedule property herein below shown.

In respect of the schedule property any person or persons asserting any right, title, interest claim or demand whatsoever in the schedule property or any part thereof, by way of sale, exchange, mortgage, charge, lien, gift, inheritance, bequest, possession, lis pendens, maintenance, easement, memorandum of understanding, agreement, power of attorney, option, right of first refusal, pre-emption or otherwise whatsoever is hereby required to notify the same in writing to the undersigned within a period **Fifteen (15) days** from the date of issuance of this notice with all documentary proof thereof failing which my client will treat the title of the schedule property as clear and marketable.

SCHEDULE PROPERTY

All that piece and parcel of the property **bearing survey No.57/2,** measuring **2 acres 32 guntas,** situated at **Chikka Gubbi Village, Bidarahalli Hobli, Bangalore East Taluk** and bounded on:-

East by: Private property,
West by: Road
North by: Properties bearing survey No.56 & 57/1 and
South by: Road

Rajanna. N, Advocate
Office at No. 36, Basement, 16, MKS Arcade, Ganganagar Main Road, Bengaluru -560 032
Mobile No. 9845543701
E-mail: nrajannaadv@gmail.com
Bangalore Dated: 06.06.2026

ANAND RATHI

ಆನಂದ ರಾಥಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್, ಎಕ್ಸ್‌ಪ್ರೆಸ್ ಜೋನ್, ಎ ವಿಂಗ್, 8ನೇ ಮಹಡಿ, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ಗೋರೆಗಾಂವ್ (ಪೂ), ಮುಂಬೈ – 400 063, ಭಾರತ. ಮೊಬೈಲ್ : +91 8433508283 | ವೆಬ್‌ಸೈಟ್ : www.rathi.com

ಇ-ಹರಾಜು ಮಾರಾಟ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕೆಳಗಿನ ಸಾಲಗಾರ / ಸಹ ಸಾಲಗಾರ / ಜಾಮೀನುದಾರರಿಗೆ ಸೂಚನೆ ನೀಡುವುದೇನೆಂದರೆ ಈ ಕೆಳಗೆ ವಿವರಿಸಿದ **ಷೆಡ್ಯೂಲ್ ಸ್ಥಿರಾಸ್ತಿಯನ್ನು ಆನಂದ್ ರಾಥಿ ಗ್ಲೋಬಲ್ ಫೈನಾನ್ಸ್ ಲಿಮಿಟಡ್ (ARGFL) (ಭದ್ರತಾ ಸಾಲದಾತ) ಇವರ ಸಾಲದ ಖಾತೆ ಸಂ. APPL00006917** ಇದರ ರಚನಾತ್ಮಕ ಸ್ವಾಧೀನವನ್ನು ARGFLನ ಅಧಿಕೃತ ಅಧಿಕಾರಿಯು ಭೌತಿಕವಾಗಿ ಸ್ವಾಧೀನ ಪಡಿಸಿಕೊಂಡಿದ್ದಾರೆ. ಸ್ವಾಧೀನ ಪಡೆದ ಆಸ್ತಿಯನ್ನು ಆನ್‌ಲೈನ್ ಇ-ಹರಾಜಿನ ವೆಬ್‌ಸೈಟ್ : **https://sarfaesi.auctiontiger.net** ಮೂಲಕ ನಿರ್ದಿಷ್ಟವಾಗಿ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾದ ದಿನಾಂಕದಂದು, **“ಎಲ್ಲಿದೆಯೋ ಹಾಗೇ” “ಹೇಗಿದೆಯೋ ಹಾಗೇ” & “ಏನಿದೆಯೋ ಹಾಗೇ”** ಆಧಾರದ ಮೇಲೆ ಷೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿ ಈ ಕೆಳಗಿನಂತೆ ಉಲ್ಲೇಖಿಸಲಾದ ಒಟ್ಟು ಮೊತ್ತ ಮತ್ತು ಅದರ ಮೇಲಿನ ಒಪ್ಪಂದದ ಬಡ್ಡಿ ಮತ್ತು ಸಾಲಗಾರರು / ಸಹ–ಸಾಲಗಾರರು / ಖಾತರಿದಾರರಿಂದ ವಸೂಲಾತಿ ದಿನಾಂಕದವರೆಗೆ ಇತರ ವೆಚ್ಚ ಮತ್ತು ಶುಲ್ಕಗಳನ್ನು ಮಾರಾಟ ಮಾಡಲಾಗುತ್ತದೆ :

ಸಾಲಗಾರ(ರು) ಹೆಸರು ವಿಳಾಸ : (1) ಶ್ರೀ ಜೋಷಿಲ್ ಆಂಡ್ರ್ಯೂಸ್ (ಸಾಲಗಾರರು) ನಂ. 18, ಹೈಸ್ ಗ್ರೇಸ್, 10ನೇ ಮೇನ್, ಗಣೇಶ ದೇವಸ್ಥಾನದ ನಂತರ, ಪ್ರಶಾಂತಿ ನಗರ, ಇಸ್ರೋ ಲೇಔಟ್, ಬೆಂಗಳೂರು – 560078.

ಸಹ-ಸಾಲಗಾರ(ರು) ಹೆಸರು ವಿಳಾಸ : (2) ಮಿಸ್ ಶತಿ ಅಂಡ್ರ್ಯೂಸ್ (ಸಹ-ಸಾಲಗಾರರು), ನಂ. 18, ಹೈಸ್ ಗ್ರೇಸ್, 10ನೇ ಮೇನ್, ಗಣೇಶ ದೇವಸ್ಥಾನದ ನಂತರ, ಪ್ರಶಾಂತಿ ನಗರ, ಇಸ್ರೋ ಲೇಔಟ್, ಬೆಂಗಳೂರು – 560078.

ಸ್ಥಿರಾಸ್ತಿಯ ವಿಳಾಸ : ಫ್ಲಾಟ್ ನಂ. ಎಫ್–402, 4ನೇ ಮಹಡಿ, ವಿಟ್ರಿಯಂ ಹೈಟ್ಸ್, ಆಸ್ತಿ ನಂ. 17 ಮತ್ತು 18, ಬಿಕಾಸಿಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು – 560078, ಕರ್ನಾಟಕ, ಭಾರತ. **ಚಕ್ಕುಬಂದಿ ಈ ರೀತಿ ಇದೆ :- ಪೂರ್ವಕ್ಕೆ :** ರಸ್ತೆ, **ಪಶ್ಚಿಮಕ್ಕೆ :** ಆಸ್ತಿ ನಂ. 16. **ಉತ್ತರಕ್ಕೆ :** ಇಸ್ರೋ ಲೇಔಟ್, **ದಕ್ಷಿಣಕ್ಕೆ :** ರಸ್ತೆ.

ಬಾಕಿ ಮೊತ್ತ (ತಗಾದೆ ಸೂಚನೆಯ ಪ್ರಕಾರ ಭವಿಷ್ಯದ ಬಡ್ಡಿ ಮತ್ತು ವೆಚ್ಚದೊಂದಿಗೆ)	ರೂ. 53,22,292/-(ರೂಪಾಯಿ ಐವತ್ತೂರು ಲಕ್ಷ ಇಪ್ಪತ್ತೆರಡು ಸಾವಿರ ಎರಡು ನೂರ ತೊಂಭತ್ತೆರಡು ಮಾತ್ರ)
ಹರಾಜಿನ ದಿನಾಂಕ	25ನೇ ಜೂನ್, 2026
ಮೀಸಲು ಬೆಲೆ	ರೂ. 65,00,000/-(ರೂಪಾಯಿ ಅರವತ್ತೈದು ಲಕ್ಷ ಮಾತ್ರ)
ಮುಂಗಡ ಹಣ ಠೇವಣಿ	ಮೀಸಲು ಬೆಲೆಯ ಶೇ. 10% ರಷ್ಟು
ಸ್ವಾಧೀನತೆಯ ಸ್ಥಿತಿ	ಭೌತಿಕ ಸ್ವಾಧೀನ
ಕನಿಷ್ಠ ಬಿಡ್ ಹೆಚ್ಚಳ ಮೊತ್ತ	ರೂ. 10,000/-(ರೂಪಾಯಿ ಹತ್ತು ಸಾವಿರ ಮಾತ್ರ)
ಉದ್ದೇಶಿತ ಖರೀದಿದಾರರಿಗೆ ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	18ನೇ ಜೂನ್, 2026 ಬೆಳಗ್ಗೆ 10.00 ರಿಂದ ಸಂಜೆ 4.00 ರವರೆಗೆ
ಕೆವೈಸಿ. ದಾಖಲೆಗಳು / ಇ.ಎಂ.ಡಿಯ ಪುರಾವೆ ಇತ್ಯಾದಿಗಳೊಂದಿಗೆ ಟೆಂಡರ್ ಫಾರಂ ಅನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ	23ನೇ ಜೂನ್, 2026 ಸಂಜೆ 4.00 ರವರೆಗೆ ಕೆವೈಸಿ. ದಾಖಲೆಗಳೊಂದಿಗೆ
ಆನ್‌ಲೈನ್ ಆಫರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	25ನೇ ಜೂನ್, 2026, ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರ ನಡುವೆ

ಗಮನಿಸಿ : ಹರಾಜು ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಉದ್ದೇಶಿತ ಬಿಡ್ಡುದಾರರು / ಖರೀದಿದಾರರು ಆನಂದ್ ರಾಥಿ ಗ್ರೂಪ್ ವೆಬ್‌ಸೈಟ್ :www.rathi.comಗೆ ಭೇಟಿ ನೀಡಬಹುದು.

ಈ ಪ್ರಕಟಣೆಯು ನಿಯಮ 8(6) ಮತ್ತು 9(1) ಅಥವಾ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002 ರ ಅಡಿಯಲ್ಲಿ ಮೇಲಿನ ಸಾಲಗಾರರು / ಸಹ–ಸಾಲಗಾರರು / ಜಾಮೀನುದಾರರಿಗೆ 15 ದಿನಗಳ ಸೂಚನೆಯಾಗಿದೆ.

ದಿನಾಂಕ : 5ನೇ ಜೂನ್, 2026
ಸ್ಥಳ : ಬೆಂಗಳೂರು.

ಆನಂದ್ ರಾಥಿ ಗ್ಲೋಬಲ್ ಫೈನಾನ್ಸ್ ಲಿಮಿಟಡ್
ಅಧಿಕೃತ ಅಧಿಕಾರಿ

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಮಂಡಳ - I, ಬೆಂಗಳೂರು
ನಂ. 4, ಎರಡನೇ ಮಹಡಿ, ಎಲ್.ಐ.ಸಿ. ಜೀವನ್ ಮಂಗಲ್ ಬಿಲ್ಡಿಂಗ್ ರೆಸಿಡೆನ್ಸಿ ರಸ್ತೆ, ಬೆಂಗಳೂರು – 560 025.

ಫಾರ್ಮ್ ನಂ. 14
(ನಿಯಮ 33(2) ನೋಡಿ)

ಡಿ.ಆರ್.ಸಿ. 911 / 2019

ಸಿಂಡಿಕೇಟ್ ಬ್ಯಾಂಕ್
ಅತ್ತಿಬೆಲೆ ಶಾಖೆ, ಅತ್ತಿಬೆಲೆ - 562 107, ಆನೇಕಲ್ ತಾಲ್ಲೂಕು. ... ಪ್ರಮಾಣಪತ್ರ ಹೊಂದಿರುವವರು

ವಿರುದ್ಧ
ಶ್ರೀ ಅಲ್ಲಾಲಪ್ಪ & ಇನ್ನೊಬ್ಬರು ... ಪ್ರಮಾಣೀಕೃತ ಸಾಲಗಾರ(ರು)

ತಗಾದೆ ಸೂಚನೆ

1. ಶ್ರೀ ಅಲ್ಲಾಲಪ್ಪ ಬಿನ್ ಲೇಟ್ ಮುನಿ ಕಾವೇರಪ್ಪ
ವಾಸ ಇಲ್ಲಿ : ಪಾರ್ವತಿನಗರ, ಚಿಕ್ಕನಹಳ್ಳಿ, ಅಂಬೇಡ್ಕರ್ ಕಾಲೋನಿ, ಅತ್ತಿಬೆಲೆ ಗ್ರಾಮ, ಆನೇಕಲ್ ತಾಲ್ಲೂಕು.
2. ಶ್ರೀ ಮದನ ಗಿರಿಯಪ್ಪ ಬಿನ್ ಶ್ರೀ ಮುನಿಯಲ್ಲಪ್ಪ
ವಾಸ ಇಲ್ಲಿ : ನಂ. 78, ಅರೇಹಳ್ಳಿ ಗ್ರಾಮ, ಮಾಯಸಂದ್ರ ಗ್ರಾಮ ಪೋಸ್ಟ್, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು.

ಈ ಮೂಲಕ ನೋಡಿದಂತೆ ವಸೂಲಾತಿ ಪ್ರಮಾಣಪತ್ರ ಅಂಗೀಕರಿಸಿದ **ಓ.ಎ. ನಂ. / 97 / 2019 ರಲ್ಲಿ** ನೀಡಲಾದ ವಸೂಲಾತಿ ಪ್ರಮಾಣಪತ್ರದ ಹಿನ್ನೆಲೆಯಲ್ಲಿ, **ಗೌರವಾನ್ವಿತ ಪ್ರಿಸೈಡಿಂಗ್ ಅಧಿಕಾರಿ, ಡಿ.ಆರ್.ಟಿ. ಬೆಂಗಳೂರು** ಇವರು **ದಿನಾಂಕ : 20-09-2019** ರಂದು ವಸೂಲಾತಿ ಮೊತ್ತ **ರೂ. 65,83,836.88/- (ರೂಪಾಯಿ ಅರವತ್ತೈದು ಲಕ್ಷ ಎಂಭತ್ತೂರು ಸಾವಿರ ಎಂಟು ನೂರ ಮೂವತ್ತಾರು ಮತ್ತು ಪೈಸೆ ಎಂಭತ್ತೆಂಟು ಮಾತ್ರ)** ಓ.ಎ. ಸಲ್ಲಿಸಿದ ದಿನಾಂಕದಿಂದ ವಸೂಲಾತಿ ಪ್ರಮಾಣಪತ್ರದವರೆಗೆ ಬಡ್ಡಿ ಮತ್ತು ವೆಚ್ಚಗಳೊಂದಿಗೆ ನಿಮ್ಮ ವಿರುದ್ಧ ಬಾಕಿ ಇರುತ್ತದೆ.

ಈ ಸೂಚನೆ ಸ್ವೀಕರಿಸಿದ 15 ದಿನಗಳ ಒಳಗೆ ಮೇಲಿನ ಮೊತ್ತವನ್ನು ಠೇವಣಿ ಇಡಲು ನಿಮ್ಮನ್ನು ಇಲ್ಲಿ ಕೋರಲಾಗಿದೆ, ಇಲ್ಲದಿದ್ದರೆ ನಿಯಮಗಳ ಪ್ರಕಾರ ವಸೂಲಿ ಮಾಡಲಾಗುತ್ತದೆ.

ಈ ಮೇಲ್ಕಂಡಂತೆ ತಿಳಿಸಿರುವ ಮೊತ್ತದ ಜೊತೆಗೆ ನೀವು ಪಾವತಿಸಬೇಕಾಗುತ್ತದೆ.

(ಎ) ಅನುಷ್ಠಾನ ಪ್ರಕ್ರಿಯೆಗಳ ಈ ಸೂಚನೆಯ ನಂತರ ಪ್ರಾರಂಭವಾಗುವ ಅವಧಿಗೆ ಪಾವತಿಸಬೇಕಾದ ಬಡ್ಡಿ.

(ಬಿ) ಈ ಸೂಚನೆಯ ಜಾರಿ ಮತ್ತು ಬಾಕಿ ಮೊತ್ತವನ್ನು ಮರುಪಡೆಯಲು ತೆಗೆದುಕೊಳ್ಳಬಹುದಾದ ಇತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಉಂಟಾದ ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳು.

ನನ್ನ ಹಸ್ತಾಕ್ಷರ ಮತ್ತು ನ್ಯಾಯಮಂಡಳಿಯ ಮುದ್ರೆಯಡಿಯಲ್ಲಿ, ಈ ದಿನ **19ನೇ ಅಕ್ಟೋಬರ್ 2019 ದಿನದಂದು** ನೀಡಲಾಗಿದೆ.

(ರಾಜಸೇಖರನ್ .ಆರ್)
ವಸೂಲಾತಿ ಅಧಿಕಾರಿ - 1
ಡಿ.ಆರ್.ಟಿ. - 1 : ಬೆಂಗಳೂರು.
ಇ-ಮೇಲ್ : rajasekharan.r@nic.in

ಸೂಚನೆ : ಆದಾಯ ತೆರಿಗೆ ಕಾಯ್ದೆ 1961 ರ ಎರಡನೇ ಷೆಡ್ಯೂಲ್‌ನ ನಿಯಮ 16 ರ ಬಗ್ಗೆ ಗಮನ ಸೆಳೆಯಲಾಗಿದೆ, ಇದನ್ನು ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳ ಕಾಯ್ದೆ, 1993 ರ ಕಾರಣದಿಂದಾಗಿ ಬಾಕಿ ಇರುವ ಸಾಲಗಳ ವಸೂಲಿಯೊಂದಿಗೆ ಕೆಳಗೆ ನೀಡಲಾಗಿದೆ.

“ನಿಯಮ 16(1) ನಿಯಮ 2 ರ ಅಡಿಯಲ್ಲಿ ಸಾಲ ಮರುಪಾವತಿಸದವರಿಗೆ ನೋಟಿಸ್ ನೀಡಿದ್ದರೆ, ಸಾಲ ಮರುಪಾವತಿ ಅಧಿಕಾರಿಯ ಅನುಮತಿಯಿಲ್ಲದೆ ಸಾಲ ಮರುಪಾವತಿ ಅಧಿಕಾರಿ ಅಥವಾ ಅವರ ಪ್ರತಿನಿಧಿ ಅಥವಾ ಅವರ ಆಸಕ್ತಿಯ ಪ್ರತಿನಿಧಿಯು ಅವರಿಗೆ ಸೇರಿದ ಯಾವುದೇ ಆಸ್ತಿಯನ್ನು ಅಡಮಾನ, ಶುಲ್ಕ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವ್ಯವಹರಿಸಲು ಸಮರ್ಥರಾಗಿರುವುದಿಲ್ಲ, ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ಹಣ ಪಾವತಿಗಾಗಿ ತೀರ್ಪನ್ನು ಕಾರ್ಯಗತಗೊಳಿಸುವಾಗ ಅಂತಹ ಆಸ್ತಿಯ ವಿರುದ್ಧ ಯಾವುದೇ ಪ್ರಕ್ರಿಯೆಯನ್ನು ಹೊರಡಿಸುವುದಿಲ್ಲ.

(2) ಈ ವೇಳಾಪಟ್ಟಿಯ ಅಡಿಯಲ್ಲಿ ಜಪ್ತಿ ಮಾಡಿದ್ದರೆ, ಲಗತ್ತಿಸಲಾದ ಆಸ್ತಿಯ ಯಾವುದೇ ಖಾಸಗಿ ವರ್ಗಾವಣೆ ಅಥವಾ ವಿತರಣೆ ಅಥವಾ ಅದರಲ್ಲಿ ಯಾವುದೇ ಬಡ್ಡಿ ಮತ್ತು ಅಂತಹ ಜಪ್ತಿಗಳಿಗೆ ವಿರುದ್ಧವಾಗಿ ಯಾವುದೇ ಸಾಲ, ಲಾಭಾಂಶ ಅಥವಾ ಇತರ ಹಣವನ್ನು ಡೀಫಾಲ್ಟರ್‌ಗೆ ಪಾವತಿಸುವುದು, ಜಪ್ತಿಯ ಅಡಿಯಲ್ಲಿ ಜಾರಿಗೊಳಿಸಬಹುದಾದ ಎಲ್ಲಾ ಹಕ್ಕುಗಳ ವಿರುದ್ಧವಾಗಿ ಅನೂರ್ಜಿತವಾಗುತ್ತದೆ.”

ಬ್ಯಾಂಕ್ ಆಫ್ ಬರೋಡ Bank of Baroda **ROSARB** - ಬೆಂಗಳೂರು ದಕ್ಷಿಣ, ಬೆಂಗಳೂರು.

ತಿದ್ದುಪಡಿ

ದಿನಾಂಕ 04.06.2026ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟಿಸಲಾದ ಇ-ಹರಾಜು ಮಾರಾಟ ಸೂಚನೆಯ ನೋಟೀಸಿನಲ್ಲಿ ಕೆಲವು ಆಸ್ತಿ ವಿವರಗಳು ಮುದ್ರಿತವಾಗಿಲ್ಲ, ಆದ್ದರಿಂದ ಈ ಕೆಳಗೆ ಸೂಚಿಸಿರುವ ಆಸ್ತಿ ವಿವರಗಳು : ವಾಸಯೋಗ್ಯ ಫ್ಲಾಟ್ ನಂ. ಟಿ–4, ಪ್ರಸ್ತುತ ಮುನಿಸಿಪಲ್ ನಂ. 46/1/6/ಟಿ–4, ಮೂರನೇ ಮಹಡಿ, ಕುಷಿ ಅಪಾರ್ಟ್‌ಮೆಂಟ್ ಹೆಸರಿರುವ ಕಟ್ಟಡವು **ಪುಟ್ಟೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ.** ವಿಸ್ತೀರ್ಣ 1650 ಚದರ ಅಡಿ ಸೂಪರ್ ನಿರ್ಮಿತ ಪ್ರದೇಶ, ಮೂರು ಬೆಡ್‌ರೂಮ್‌ಗಳು, ಒಂದು ಸಾಮಾನ್ಯ ಬಾತ್‌ರೂಮ್, ಹಾಲ್, ಮಾಡ್ಯುಲರ್ ಕಿಚನ್, ವಿಟ್ರಿಫೈಡ್ ನೆಲಹಾಸು, ಪ್ಯಾಸೇಜ್ ಬಾಲ್ಕನಿಯನ್ನು ಒಳಗೊಂಡಿದ್ದು ವಿದ್ಯುತ್ ಫಿಟ್ಟಿಂಗ್‌ಗಳು ಮತ್ತು ಅವುಗಳ ಮೇಲೆ ಎಲ್ಲಾ ನಾಗರೀಕ ಸೌಲಭ್ಯಗಳೊಂದಿಗೆ ಮತ್ತು ನೆಲಮಾಳಿಗೆಯಲ್ಲಿ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಜಾಗವನ್ನು ಹೊಂದಿದೆ. **ಚಕ್ಕುಬಂದಿ : ಪೂರ್ವಕ್ಕೆ :** ತೆರೆದ ಜಾಗ, **ಪಶ್ಚಿಮಕ್ಕೆ :** ಕಾಮನ್ ಕಾರಿಡಾರ್ ಮತ್ತು ಮುಖ್ಯ ದ್ವಾರದ ಬಾಗಿಲು ಮತ್ತು ಫ್ಲಾಟ್ ನಂ. ಟಿ3, **ಉತ್ತರಕ್ಕೆ :** ತೆರೆದ ಜಾಗ, **ದಕ್ಷಿಣಕ್ಕೆ :** ತೆರೆದ ಜಾಗ. ಎಂದು ತಿದ್ದಿ ಓದಿಕೊಳ್ಳುವುದು, ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ದಿನಾಂಕ : 05.06.2026 ಸಹಿ/–
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

IN THE COURT OF 28th ADDL., CITY CIVIL JUDGE MAYOHALL, AT BANGALORE (CCH:29)

O.S No. 25939 / 2014

BETWEEN: Mr.Chinnappa V.,
S/o Sri.Late.Venkatappa, Aged about 33 years, Residing at, No.169, 1st Cross, Near Anjenappa Temple,Marathalli, Bangalore - 560037. ....Plaintiff
AND
Smt.S.Vanitha and Others ....Defendants

SUMMONS TO THE DEFENDANT No. 2

To:
Ms. S.Bhumika D/o Sri.S. Shreekanth Babu, Aged about 20 years, Residing at No.8, 2nd Cross, Chinnappanahalli, Bangalore – 560037.,

Whereas, the suit is filed by the Plaintiff, against the Defendants for specific performance Defendants to execute the Sale Deed in furtherance of the Agreement for Sale dated 07-06-2013, with respect to the Schedule Property in favour of the Plaintiff by performing their part of the act or appoint court commissioner to execute the Sale Deed on behalf of Defendant in favour of Plaintiff.

Pass Permanent Injunction against the Defendants, their legal heirs, representatives and assigns from creating any charge over or transferring, alienating or selling the Schedule Property in favour of any third parties.

SCHEDULE

All that piece and parcel of the Property bearing No.154/12, New Khatha No.690, Old Khatha No.960, situated at Doddannekundi Village, Varthur Hobli, Bangalore East Taluk, now comes under the jurisdiction of BBMP, Bangalore, East to West 60 Feet and North to South 40 Feet, measuring 2400 Square Feet and bounded on: - East by: Road, West by : Private Property, North by : Vacant Site No.5, South by : Property No.7 belongs to Sri. Sathyanarayana.

Hence, the Defendant No.2 hereby gave this notice to appear before the Court on **22/06/2026 At 11.AM** either personally or through his Counsel to answer to the Plaint failing which, the case will be heard and decided ex-parte.

Given under my hand and the seal of the court this the 4th day of June 2026.

By Order of the Court
Sd/- Deputy registrar
Civil Court, Mayohall Unit, Bangalore

Plaintiff Counsel: M.G.C & Co.,
Advocate and Solicitors,
No.66, 4th Cross, Xavier Layout,
Bangalore - 560047.